


**2005ರ ಹಿಂದೂ ಉತ್ತರಾಧಿಕಾರ (ತಿದ್ದುಪಡಿ) ಕಾಯ್ದೆಯಡಿಯಲ್ಲಿ ಮದುವೆಯಾದ ಎಲ್ಲ ಹೆಣ್ಣು ಮಕ್ಕಳಿಗೂ ಪಿತ್ರಾರ್ಜಿತ ಆಸ್ತಿಯಲ್ಲಿ ಗಂಡು ಮಕ್ಕಳಂತೆಯೇ ಪಾಲನ್ನು ಪಡೆಯುವ ಹಕ್ಕು ಇದೆ.**



ಮಮತೆ, ಬಿಡಿಸಲಾಗದ ಅನುಬಂಧ ಕೂಡ. ಪೋಷಕರೊಂದಿಗೆ ಮಕ್ಕಳೆಲ್ಲಾ ವ್ಯವಸಾಯ ಮಾಡುತ್ತಾ ಅನ್ಯೋನ್ಯವಾಗಿ ಜೀವನ ಸಾಗಿಸುತ್ತಿರುತ್ತಾರೆ. ಕಾಲಾನಂತರದಲ್ಲಿ ಬಹುಶಃ ಏರುತ್ತಿರುವ ಜೀವನ ವೆಚ್ಚಗಳನ್ನು ಸರಿದೂಗಿಸಲೋ ಎಂಬಂತೆ ಮಕ್ಕಳಲ್ಲಿ ಕೆಲವರು ಸ್ವಯಂ ಉದ್ಯೋಗ ಅರಸಿ ದೂರದ ಊರಿಗೆ ಹೋಗುತ್ತಾರೆ. ಅಲ್ಲಿಯೇ ವರ್ಷಗಳ ಕಾಲ ನೆಲೆಸುತ್ತಾರೆ. ಉಳಿದ ಕೆಲವು ಮಕ್ಕಳು ಮನೆಯಲ್ಲಿಯೇ ಕೃಷಿಯನ್ನು ಮುಂದುವರಿಸಿರುತ್ತಾರೆ.

ಕಾಲ ಎಂದಿಗೂ ನಿಲ್ಲುವುದಿಲ್ಲ. ಕುಟುಂಬದ ಪೋಷಕರು ಸ್ವರ್ಗಸ್ಥರಾಗುತ್ತಾರೆ. ಅವರ ಮಕ್ಕಳು ಅವರವರ ಕೆಲಸ ಕಾರ್ಯಗಳಲ್ಲಿ ಮಗ್ನರಾಗಿರುತ್ತಾರೆ. ಕೆಲವು ವರ್ಷಗಳು ಉರುಳುತ್ತವೆ. ತಂದೆ ತಾಯಿಯರಿರುವ ತನಕ ಜೇನುಗೂಡಿನಂತಿದ್ದ ಕುಟುಂಬದ ಚಿತ್ರಣ ಬದಲಾಗುತ್ತದೆ. ಇಷ್ಟು ದಿನಗಳ ಕಾಲ ಇದ್ದ ಪ್ರೀತಿ, ಕೌಟುಂಬಿಕ ವಾತ್ಸಲ್ಯವೆಲ್ಲ ಮಾಯವಾಗಿರುತ್ತದೆ. ಮನೆಯಲ್ಲಿದ್ದ ಸಹೋದರರ ವರಸೆಯೇ ಬದಲಾಗಿರುತ್ತದೆ. ಹೊರ ಊರಿನಲ್ಲಿರುವ ಸಹೋದರರು ಬಂದರೆ ಯಾರೋ ಆಗಂತುಕರು ಬಂದಂತೆಯೋ ಅಥವಾ ಏನನ್ನೋ ದೋಚಿಕೊಂಡು ಹೋಗಲು ಬಂದವರಂತೆ ನೋಡಲು ಶುರುಮಾಡುತ್ತಾರೆ! ಮೊದಲಿದ್ದ ಆತ್ಮೀಯತೆ ಮಾಯವಾಗಿ ಅಧಿಕಾರೀ ಧೋರಣೆ ಮಾತಿನಲ್ಲಿ ವ್ಯಕ್ತವಾಗುತ್ತದೆ. ಏನೂ ಅರ್ಥವಾಗದ ಹೊರ ಊರಿನ ಮುಗ್ಧ ಸಹೋದರರು ಕೂಲಂಕಷವಾಗಿ,